ಒಂದಾಣೆ ಮಾಲೆ 235

ಜ್ಞಾನೇಶ್ವರೀ

ಮಹಾರಾಷ್ಟ್ರದ ಸುಪ್ರಸಿದ್ಧ ಸಂತ ಜ್ಞಾನೇಶ್ವರರಿಂದ ರಚಿತವಾದ "ಜ್ಞಾನೇಶ್ವರಿಯ", ಆರಿಸಿದ 108 ಓವಿಗಳು.

*

ಕನ್ನಡಿಸಿದವರು:
"ಸಂತಶರಣ".

*

1959

ಬೆಲೆ: ೧ ಆಣೆ.

ಒಂದಾಣೆ ಮಾಲೆ, ಮಂಗಳೂರು.

ನಿವೇದನೆ

ಈ ಚಿಕ್ಕ ಸಂಗ್ರಹದಲ್ಲಿ ಶ್ರೀ ಜ್ಞಾನೇಶ್ವರ ಮಹಾರಾಜರ ಪ್ರಸಿದ್ಧ ಕೃತಿಯಾದ "ಜ್ಞಾನೇಶ್ವರಿ"ಯ 108 ಓವಿಗಳನ್ನು ಆರಿಸಿ, ಅದರ ಕನ್ನಡ ಗದ್ಯಾನುವಾದವನ್ನು ಕೊಟ್ಟಿದ್ದೇವೆ. ಆಯಾ ಅಧ್ಯಾಯ–ಓವಿಗಳ ಸಂಖ್ಯೆಯನ್ನು ಅಲ್ಲಲ್ಲಿ ಕಾಣಿಸಿದ್ದೇವೆ.

ಸಂತ ಸಾಹಿತ್ಯ ಪ್ರೇಮಿಗಳೂ ಭಕ್ತರೂ ಆಗಿದ್ದ ದಿವಂಗತ ಶ್ರೀ।, ಹಟ್ಟಂಗಡಿ ಶಂಕರರಾಯರು ಕೆಲವು ವರ್ಷಗಳ ಹಿಂದೆ ಸಾಂಸಾರಿಕ ಸಾಧಕರ ಮನನ ಚಿಂತನೆಗಳಿಗೋಸ್ಕರ "ಜ್ಞಾನಾಮೃತ" ಎಂಬ ಶ್ರೀ ಜ್ಞಾನೇಶ್ವರಕೃತ ಗ್ರಂಥಗಳ ಒಂದು ಚಿಕ್ಕ ಸಂಗ್ರಹವನ್ನು ಮೂಲದೊಂದಿಗೆ ಇಂಗ್ಲಿಷ್ ಭಾಷಾಂತರ ಕೊಟ್ಟು ಪ್ರಕಟಿಸಿ ಧರ್ಮಾರ್ಥವಾಗಿ ಹಂಚಿದ್ದರು.

ಅವರ ಅಮೂಲ್ಯ ಸಂಗ್ರಹದ ಮುಖ್ಯ ಸಹಾಯವನ್ನು ಪಡೆದು ಈ ಕನ್ನಡ ಗದ್ಯಾನುವಾದವನ್ನು ತಯಾರಿಸಿ ವಾಚಕರ ಮುಂದೆ ಇಟ್ಟಿರುವೆವು.

ಈ ಅನುವಾದದಲ್ಲಿ ಹಲವಾರು ಲೋಪದೋಷಗಳು ಬಂದಿರಬಹುದು. ಸಹೃದಯರಾದ ವಾಚಕರು ಅವನ್ನೆಲ್ಲಾ ಮನ್ನಿಸಬೇಕಾಗಿ ಪ್ರಾರ್ಥನೆ. ಈ ಸೇವೆಯು ಎಲ್ಲರಿಗೂ ಪ್ರಿಯವಾಗಲಿ, ಪ್ರಬೋಧಕವಾಗಲಿ ಎಂದು ಹಾರೈಸಿ ವಿರಮಿಸುವೆವು.

ಇಂತಿ

ಲೇಖಕ.

....

ಜ್ಞಾನೇಶ್ವರೀ

೧. ಓಂಕಾರಸ್ವರೂಪಿಯೂ, ಸಕಲಕ್ಕೂ ಆದಿಕಾರಣನೂ, ವೇದ ಪ್ರತಿಪಾದ್ಯನೂ, ಆದ ನಿನಗೆ ನಮಸ್ಕಾರವು. ತನ್ನನ್ನು ತಾನೇ ಅರಿತವನೂ ಆತ್ಮರೂಪಿಯೂ ಆದ ನಿನಗೆ ಜಯಜಯಕಾರವಿರಲಿ. [1—1]

೨. ಯಾರ ಮಹಿಮೆಯಿಂದ ನಾನು ಈ ಸಂಸಾರ ಪ್ರವಾಹದಿಂದ ಪಾರಾದೆನೋ ಆ ಸದ್ಗುರುವು ನನ್ನ ಹೃದಯದಲ್ಲಿ ವಿರಾಜಮಾನನಾಗಿರುವನು. ಆದುದರಿಂದಲೇ ವಿಶೇಷವಾಗಿ ನನಗೆ ವಿವೇಕದಲ್ಲಿ ಅತ್ಯಾದರವಿರುವುದು. [1—22]

೩. ಗಿಡದ ಬುಡಕ್ಕೆ ನೀರನ್ನು ಚಿಮುಕಿಸಿದರೆ ಹೇಗೆ ಗೆಲ್ಲುಗಳೂ, ಎಲೆಗಳೂ ಸಂತೋಷದಿಂದ ನಲಿಯುವುವೊ ಹಾಗೆ ತಿಳಿದವರು ಗುರುವನ್ನು ಭಜಿಸಿ ಕೃತಕಾರ್ಯರಾಗಬೇಕು. [1 - 25]

೪. ಈ ಭೌತಿಕ ಪ್ರಪಂಚವೆಂಬ ಉಪಾಧಿಯಲ್ಲಿ ಆತ್ಮಚೈತನ್ಯವು ಸರ್ವಗತವಾಗಿ ಗುಪ್ತವಾಗಿದೆ (ಅಡಗಿದೆ). ತತ್ವವನ್ನು ಬಲ್ಲ ಸಂತರು ಇದನ್ನು ಅರಿತುಕೊಂಡಿದ್ದಾರೆ. [2-126]

೫. ಅರ್ಜುನಾ! ಚಿತ್ತದ ಸಮತ್ವವೆಂಬುದು ಯಾವುದೋ ಅದೇ ಯೋಗದ ಸಾರವೆಂದು ತಿಳಿ. ಅಲ್ಲಿ ಮನಸ್ಸು-ಬುದ್ಧಿಗಳ ಏಕತೆಯು ಪ್ರಕಟವಾಗುವುದು. [2-273]

೬. ಆದುದರಿಂದ ಇಂದ್ರಿಯಗಳಿಗೆ ವಿಷಯವಾಗಿರುವ ವಸ್ತುಗಳನ್ನು ಪೂರ್ಣವಾಗಿ ಮನಸ್ಸಿನಿಂದ ತ್ಯಜಿಸಬೇಕು. ಆಗ ರಾಗದ್ವೇಷಗಳು ಸ್ವಾಭಾವಿಕವಾಗಿ ಬೇಗನೆ ನಾಶವಾಗುವುವು. [2-331]

೭. ಯಾರು ಆತ್ಮಬೋಧದಲ್ಲಿ ಸಂತೋಷಪಡುವನೋ ಪರಮಾನಂದದಲ್ಲಿ ರಮಿಸುವನೋ ಅವನೇ ಸ್ಥಿತಪ್ರಜ್ಞನೆಂದು ನಿಶ್ಚಯವಾಗಿ ತಿಳಿ. [2-366]

೮. ಅಂಥವನು ಅಹಂಕಾರವನ್ನು ದಂಡಿಸಿ ಸಕಲ ಕಾಮನೆಗಳ ತ್ಯಾಗಮಾಡಿ ವಿಶ್ವದೊಡನೆ ಏಕರೂಪನಾಗಿ ವಿಶ್ವದಲ್ಲಿ ಸಂಚರಿಸುವನು. [2-367]

೯. ಆದುದರಿಂದ ಯೋಗ್ಯವಾದುದಾಗಿ ಅವಸರ ಪ್ರಾಪ್ತವಾಗಿ

ಯಾವ ಯಾವ ಕರ್ಮಗಳು ಒದಗಿಬರುವುವೊ ಆಯಾ ಕರ್ಮಗಳನ್ನು ನೀನು ಫಲಾಪೇಕ್ಷೆಯಿಲ್ಲದೆ ಆಚರಿಸು. [3-78]

೧೦. ಯಾವುದು ಸ್ವಧರ್ಮವೊ (ಆಚರಿಸಬೇಕಾದ ಕರ್ತವ್ಯವೊ) ಅದನ್ನೇ ನೀನು ನಿತ್ಯ ಯಜ್ಞವಾಗಿ ಭಾವಿಸು. ಹೀಗೆ ಆಚರಿಸುವುದರಿಂದ ಪಾಪವು ನಿನ್ನಲ್ಲಿ ಪ್ರವೇಶ ಮಾಡಲಾರದು. [3-81]

೧೧. ಹೀಗೆ ರಾಗದ್ವೇಷಗಳು ಶಾಂತವಾದರೆ ಭಗವಂತನ ರಾಜ್ಯವು ಪ್ರಾಪ್ತವಾದಂತೆಯೇ ಸರಿ. ಆಗ ಅವನು ಆತ್ಮಸುಖವನ್ನು ತನ್ನಲ್ಲಿ ತಾನೇ ಅನುಭವಿಸುವನು. [3-271]

೧೨. ಯಾರು ಯಾವ ರೀತಿಯಿಂದ ನನ್ನನ್ನು ಭಜಿಸುವರೋ ಅವರನ್ನು ನಾನೂ ಅದೇ ರೀತಿಯಿಂದ ಸ್ವಾಗತಿಸುತ್ತೇನೆ. [4-46]

೧೩. ಅಂತಹ ಶ್ರೇಷ್ಠವಾದ ಜ್ಞಾನವನ್ನು ನೀನು ಗಳಿಸಲು ಮನಸ್ಸು ಮಾಡುವೆಯಾದರೆ ಈ ಸಂತಸತ್ಪುರುಷರನ್ನು ನೀನು ಸರ್ವ ಭಾವದಿಂದಲೂ ಭಜಿಸಬೇಕು—ಸೇವಿಸಬೇಕು. [4-164]

೧೪. ಆಗ ದೇಹ, ಮನ, ಜೀವ ಇವೆಲ್ಲವುಗಳಿಂದ ಕೂಡಿ ನೀನು ಅವರ ಚರಣಗಳಲ್ಲಿ ಲೀನನಾಗಬೇಕು ಮತ್ತು ನಿರಹಂಕಾರಪೂರ್ವಕವಾಗಿ ಅವರ ಸಕಲ ಸೇವೆಯನ್ನೂ ಮಾಡಬೇಕು. [4-166]

೧೫. ಆದುದರಿಂದ ಸಂಶಯಕ್ಕಿಂತಲೂ ದೊಡ್ಡದಾದ ಭಯಂಕರ ಪಾಪವು ಬೇರೊಂದಿಲ್ಲ. ಸಂಶಯವೇ ಜೀವಿಗಳನ್ನು ಹಿಡಿದು ಹಾಕುವ ವಿನಾಶದ ಬಲೆಯಾಗಿದೆ. [4-202]

೧೬. ಮತ್ತು ಯಾರ ಮನಸ್ಸಿನಲ್ಲಿ "ನಾನು–ನನ್ನದು" ಎಂಬ ಸ್ಮರಣೆಯು ಮರೆತು ಹೋಗಿದೆಯೋ, ಅರ್ಜುನಾ, ಅವನನ್ನೇ ನೀನು ನಿರಂತರ ಸನ್ಯಾಸಿಯೆಂದು ಭಾವಿಸು. [5-20]

೧೭. ಕೇಳು ಲೋಹದ ಮಿಶ್ರಣ ದೋಷವು ದೂರವಾದೊಡನೆ ಬಂಗಾರವು ಹೇಗೆ ಶುದ್ಧವಾಗುವುದೋ ಹಾಗೆ ಸಂಕಲ್ಪಲೋಪದಿಂದ ಶುದ್ಧವಾದ ಜೀವವು ಬ್ರಹ್ಮತ್ವವನ್ನು ಪಡೆಯುವುದು. [6-82]

೧೮. ಯಾವ ಬುದ್ಧಿಯಲ್ಲಿ ಧೈರ್ಯವು ನೆಲೆಗೊಂಡಿದೆಯೊ ಆ ಬುದ್ಧಿಯು ಅನುಭವದ ದಾರಿಯಿಂದ ಮನಸ್ಸನ್ನು ಮೆಲ್ಲಮೆಲ್ಲನೆ ಆತ್ಮಭುವನದಲ್ಲಿ ಪ್ರತಿಷ್ಠಿಸುವುದು. [6-378]

೧೯. ಆದರೆ ವೈರಾಗ್ಯದ ಸಹಾಯದಿಂದ ಆ ಮನಸ್ಸನ್ನು ಅಭ್ಯಾಸದ ದಾರಿಗೆ ಹಚ್ಚಿದರೆ ಸ್ವಲ್ಪ ಸಮಯದಲ್ಲಿಯೇ ಆ ಮನಸ್ಸು ಸ್ಥಿರಗೊಳ್ಳುವುದು—ಏಕಾಗ್ರತೆಯನ್ನು ಪಡೆಯುವುದು. [6-419]

೨೦. ಏಕೆಂದರೆ ಮನಸ್ಸು ಚಂಚಲವಾದರೂ ಅದರಲ್ಲಿ ಒಂದು ವಿಶೇಷ ಗುಣವಿದೆ. ಸವಿ (ಸಿಹಿ)ಯಿದ್ದಲ್ಲಿ ಅದು ಅಂಟಿಕೊಳ್ಳುವುದು. ಆದುದರಿಂದ ಮನಸ್ಸಿಗೆ ಯಾವಾಗಲೂ ಅನುಭವ ಸುಖದ (ಆತ್ಮಸುಖದ) ಸವಿಯನ್ನು ತೋರಿಸುತ್ತಾ ಇರು. ಆಗ ಅದು ಸ್ಥಿರವಾಗುವುದು. [6-420]

೨೧. ಹಾಗೆಯೇ ಈ ಪ್ರಪಂಚದಲ್ಲಿರುವ ಎಲ್ಲಾ ಜೀವರಾಶಿಗಳೂ ನಿಜವಾಗಿಯೂ ನನ್ನ ಅವಯವಗಳೇ ಆಗಿವೆ. ಆದರೆ ಮಾಯೆಯ ಪ್ರಭಾವದಿಂದ ಅವೆಲ್ಲವೂ ಜೀವದಶೆಯನ್ನು ಪಡೆದುವು. [7-66]

೨೨. ಅನೇಕರು (ಶ್ರದ್ಧೆಯಿಲ್ಲದವರು) ತಮ್ಮ ದೇಹದಲ್ಲಿ ಅಹಂಕಾರದ ಭೂತಸಂಚಾರವಾದುದರಿಂದ ಚಾಂಚಲ್ಯಕ್ಕೆ ಗುರಿಯಾಗುವರು. ಅದರ ಪರಿಣಾಮವಾಗಿ ಆತ್ಮಸ್ವರೂಪದ ಜ್ಞಾನವು ಅವರಿಗೆ ಸಂಪೂರ್ಣ ಮರೆತು ಹೋಗಿರುವುದು. [7-103]

೨೩. "ಈ ಸಮಸ್ತವೂ ಶ್ರೀ ವಾಸುದೇವ ಸ್ವರೂಪವು" ಎಂಬ ಭಾವವು ಯಾರಲ್ಲಿ ಅನುಭವದಿಂದ ಉತ್ಪನ್ನವಾಗಿದೆಯೋ ಅವನೇ ಭಕ್ತರಲ್ಲಿ ಶ್ರೇಷ್ಠನು-ಭಕ್ತರಾಜನು. ಅವನೇ ಜ್ಞಾನಿಯೂ ಆಗಿರುವನು. [7-136]

೨೪. ಮತ್ತು ಮರಣಕಾಲದಲ್ಲಿ ಯಾವನೊಬ್ಬನು ಯಾವುದನ್ನು ಸ್ಮರಿಸುವನೋ ಅವನು ಅದೇ ಗತಿಯನ್ನೇ ಪಡೆಯುವನು. ಆದುದರಿಂದ ನೀನು ಸರ್ವಕಾಲದಲ್ಲಿಯೂ ನನ್ನನ್ನೇ ಸ್ಮರಿಸುತ್ತಿರು. [8–75]

೨೫. ಹೀಗೆ ಸರ್ವ ಸುಖಗಳ ಆಶ್ರಯಸ್ಥಾನನಾದ ನಾನು—ರಾಮನು—ಎಲ್ಲ ಹೃದಯದಲ್ಲಿಯೂ ನೆಲಸಿರುವಾಗ ಭ್ರಾಂತಿವಶರಾದ ಜನರ ಕಾಮನೆಯು ನನ್ನನ್ನು ಬಿಟ್ಟು ವಿಷಯಗಳಲ್ಲಿಯೇ ಸೇರಿಕೊಂಡಿದೆ. [9–60]

೨೬. ನಾನೊಮ್ಮೆ ವೈಕುಂಠದಲ್ಲಿಯೂ ಸಿಗಲಾರೆ, ಕೆಲವು ವೇಳೆ ಸೂರ್ಯಬಿಂಬದಲ್ಲಿಯೂ ಕಾಣಲಾರೆ. ಯೋಗಿಗಳ ಏಕಾಗ್ರ ಮನಸ್ಸಿನಿಂದಲೂ ಒಮ್ಮೊಮ್ಮೆ ನಾನು ಕಣ್ಮರೆಯಾಗುವೆ. [9-207

೨೭. ಆದರೆ ಪಾಂಡವಾ, ಎಲ್ಲ ನಾನು ಕಳೆದು ಹೋದರೂ ಕಣ್ಮರೆ

ಯಾದರೂ ನನ್ನ ನಾಮಘೋಷವನ್ನು ಸತತವಾಗಿ ಗಟ್ಟಿಯಾಗಿ ಉಚ್ಚರಿಸುವವರ ಬಳಿಯಲ್ಲಿ ನಾನು ಸಿಗಬಲ್ಲೆ. [9-208]

೨೮. ಹಾಗೆ ನನ್ನ ಭಕ್ತರಿಗೆ ನನ್ನ ಹೊರತಾಗಿ ಉತ್ತಮವಾದ, ಸುಂದರವಾದ ವಸ್ತುವು ಪ್ರಪಂಚದಲ್ಲಿ ಬೇರೊಂದಿಲ್ಲ ನೋಡು. ಅವರು ತಮ್ಮ ಜೀವನವನ್ನೇ ನನ್ನ ಹೆಸರಿನಿಂದ ಅಂಕಿತಗೊಳಿಸಿರುವರು. [9-336]

೨೯. ಹೀಗೆ ಅನನ್ಯ ಭಾವದಿಂದ ನನ್ನನ್ನು ಚಿಂತಿಸುವವರ, ಹಾಗೂ ನನ್ನ ಉಪಾಸನೆಯನ್ನು ಮಾಡುವವರ ಸೇವೆಯನ್ನು ನಾನೇ ಕೈಕೊಳ್ಳುತ್ತೇನೆ. [9-337]

೩೦. ಇಲ್ಲಿ ತಾನು ಅರಿತಿರುವೆನೆನ್ನುವವನು ಅರಿತಿಲ್ಲ. ತನ್ನ ಜಾಣ್ಮೆಯನ್ನು ಹೊರಗೆ ತೋರಿಸಿಕೊಳ್ಳುವವನು ಮಿಥ್ಯಾವಾದಿ. ತಾನು ಪೂರ್ಣತ್ವವನ್ನು ಪಡೆದಿದ್ದೇನೆ ಎಂದು ಹೇಳುವವನು ಏನೂ ಆಗಿಲ್ಲ. [9-368]

೩೧. ಆದುದರಿಂದ ದೊಡ್ಡಸ್ತಿಕೆಯ ಗರ್ವವನ್ನು ದೂರಮಾಡಬೇಕು. ಜ್ಞಾನದ ಅಹಂಕಾರವನ್ನು ಮರೆಯಬೇಕು. ಪ್ರಪಂಚದಲ್ಲಿ ಕಿರಿಯರಲ್ಲಿ ಕಿರಿಯನಾಗಬೇಕು. ಆಗ ಮಾತ್ರ ಅವನು ನನಗೆ ಅತಿ ಸಮೀಪನಾಗುವನು. [8-378]

೩೨. ನಾನು ಭಕ್ತಿಯೊಂದನ್ನೇ ನೋಡುವವನು. ಭಕ್ತಿಯಲ್ಲಿ ಹಿರಿದು ಕಿರಿದು ಎಂಬ ಭೇದವನ್ನು ಎಣಿಸಲಾರೆ. ನಾನು ವಿಶುದ್ಧ ಭಕ್ತಿ ಭಾವಕ್ಕೆ ಅತಿಥಿಯಾಗಿ ಬಂದವನು, ಒಲಿಯುವವನು. ಆ ಭಾವ ಯಾರದಾದರೂ ಸರಿಯೇ. [9-395]

೩೩. ವಿಷದ ಗಡ್ಡೆಯನ್ನು ಜಜ್ಜಿ ರಸವನ್ನು ಹಿಂಡಿ ಅದಕ್ಕೆ ಅಮೃತವೆಂಬ ಹೆಸರನ್ನು ಕೊಟ್ಟು ಸ್ವೀಕರಿಸಿದರೆ ಹೇಗೆ ಅಮರನಾಗಲು ಸಾಧ್ಯವಿಲ್ಲವೊ(?) [9-498]

೩೪. ಹಾಗೆ ವಿಷಯಗಳಿಂದ ದೊರೆತ ಸುಖವು ಕೇವಲ ದುಃಖರೂಪವಾಗಿಯೇ ಇದೆ. ಆದರೆ ಏನುಮಾಡಲು ಸಾಧ್ಯ? ಮೂರ್ಖನಾಗಿರುವವನು ಅದನ್ನು ಸೇವಿಸದೆ ಸುಮ್ಮನಿರಲಾರನು. [9-499]

೩೫. ಆಹಾ! ಈ ಮರ್ತ್ಯಲೋಕವೇ ಅಡಿಮೇಲಾಗಿ ವಕ್ರವಾಗಿವೆಯಲ್ಲಾ, ದುಷ್ಟವಾಗಿದೆಯಲ್ಲಾ. ಅರ್ಜುನಾ, ನೀನು ಇಲ್ಲಿ ಯತ್ನವಿಲ್ಲದೆ ಜನ್ಮವನ್ನು ತಾಳಿರುವೆಯಾದರೂ [9-55]

೩೬. ತಡಮಾಡದೆ ಅತಿ ಶೀಘ್ರದಲ್ಲಿಯೇ ಇಲ್ಲಿಂದ ಹೊರಗೆ ಬಾ. ಭಕ್ತಿಯ ದಾರಿಯನ್ನು ಅನುಸರಿಸು. ಅದರಿಂದ ನೀನು ನನ್ನ ನಿರ್ದೋಷವಾದ ನಿಜಸ್ಥಾನವನ್ನು ಪಡೆಯುವೆ. [9-576]

೩೭. ನಿನ್ನ ಮನಸ್ಸನ್ನು ನನ್ನಲ್ಲಿಯೇ ಲೀನಗೊಳಿಸು! ನನ್ನ ಭಜನೆಯಲ್ಲಿ, ಪೂಜೆಯಲ್ಲಿ ಪ್ರೇಮವನ್ನು ತಾಳು. ನನ್ನೊಬ್ಬನನ್ನೇ ಎಲ್ಲೆಲ್ಲಿಯೂ ಸರ್ವತ್ರವಾಗಿ ನಮಸ್ಕರಿಸು. [9-517]

೩೮ ನೋಡು, ನನ್ನಲ್ಲಿಯೇ ಲಕ್ಷ್ಯವನ್ನಿರಿಸಿ ಯಾವತ್ತೂ ಸಂಕಲ್ಪಗಳನ್ನು ಪೂರ್ಣವಾಗಿ ಭಸ್ಮ ಮಾಡುವ ಕಾರ್ಯದ ಹೆಸರೆ "ನನಗೋಸ್ಕರ ಮಾಡುವ ಪವಿತ್ರ ಯಜ್ಞ" ಎಂದು ತಿಳಿ. [9-518]

೩೯. ಈ ರೀತಿಯಲ್ಲಿ ನೀನು ನನ್ನಲ್ಲಿ ಐಕ್ಯವನ್ನು ಹೊಂದಿ ನನ್ನ ಸ್ವರೂಪವನ್ನೇ ಗಳಿಸುವೆ. ಈ ಅಂತರ್ಯದ ರಹಸ್ಯವನ್ನು ನಾನೀಗ ಬಹಿರಂಗವಾಗಿ ಹೇಳುತಿದ್ದೇನೆ. [9-519]

೪೦. ಯಾವ ಯಾವ ಜೀವಿಗಳನ್ನು ನೀನು ಕಾಣುವಿಯೋ ಅವೆಲ್ಲವೂ ಪ್ರತ್ಯಕ್ಷ ಭಗವಂತನೆಂದೇ ಭಾವಿಸು. ಇದೇ ನನ್ನ ಭಕ್ತಿಯೋಗವೆಂದು ನಿಶ್ಚಿತವಾಗಿ ತಿಳಿ. [10-118]

೪೧. ಯಜ್ಞಗಳಲ್ಲಿ ಅತಿ ಶ್ರೇಷ್ಠವಾದ ಯಜ್ಞವೆಂದರೆ ನಾಮಜಪಯಜ್ಞವು. ಅದಕ್ಕೆ ಸ್ನಾನಾದಿ ಕರ್ಮಗಳ ಬಾಧೆಯು ತಟ್ಟಲಾರದು. ಧರ್ಮಾಧರ್ಮಗಳೆಲ್ಲವೂ ನಾಮಸ್ಮರಣೆಯಿಂದ ಪಾವನವಾಗುವವು. ವೇದಗಳ ಆಧಾರದಿಂದ ಹೇಳುವುದಾದರೆ ನಾಮವೇ ಪರಬ್ರಹ್ಮವೆಂದು ಅವು ಸಾರುತ್ತಿವೆ. [10-233]

೪೨. "ಕೌರವರನ್ನು ಕೊಲ್ಲುವವನು ನಾನು, ನನ್ನಿಂದ ಅವರು ಕೊಲ್ಲಲ್ಪಡುವವರು" ಈ ಮೋಹದ ಬಲೆಯಲ್ಲಿ ಅರ್ಜುನನು ಸಿಲುಕಿದ್ದನು. ಈ ಮೋಹವನ್ನು ದೂರಮಾಡಲು ಭಗವಂತನು ತನ್ನ ವಿಶ್ವರೂಪವನ್ನು ಅರ್ಜುನನಿಗೆ ಕಾಣಿಸಿದನು. [11-407]

೪೩. ಈ ನನ್ನ ರೂಪವು ಘೋರವಾಗಿದೆ, ವಿಕಾರವಾಗಿದೆ, ಮಹತ್ತಾಗಿದೆ. ಆದರೂ ಇದನ್ನೇ ನಿನ್ನ ನಿಶ್ಚಯದ ಮನೆಯಾಗಿ ಮಾಡಿಕೋ [11-632]

೪೪. ನಿನ್ನ ಮನಸ್ಸಮಾಧಾನಕ್ಕೆ ಬಾಹ್ಯಸಖ್ಯಸುಖವನ್ನು ಪಡೆಯುವುದಕ್ಕಾಗಿ ನೀನು ಈ ದಿವ್ಯವಾದ ಚತುರ್ಭುಜ ಮೂರ್ತಿಯ ಸಹವಾಸದ ಆನಂದವನ್ನು ಭೋಗಿಸು. [11-636]

೪೫. ನನ್ನ ಭಕ್ತರಾಗಿದ್ದು ಸಂಸಾರದ ಚಿಂತೆಯನ್ನು ವಹಿಸುವುದೆಂದರೆ ಶ್ರೀಮಂತನ ಪತ್ನಿಯಾಗಿದ್ದವಳು ಕೆಂಪಕ್ಕಿ ಅನ್ನವನ್ನು ಬೇಡಿದಂತೆ ಹಾಸ್ಯಾಸ್ಪದವಾಗಿದೆ. [12-85]

೪೬. ಹಾಗಿದ್ದರೆ ನೋಡು; ಹೀಗಾದರೂ ಮಾಡು. ಈ ದಿನದ ಎಂಟು ಜಾವಗಳಲ್ಲಿ ಕೇವಲ ಒಂದು ನಿಮಿಷಕಾಲವಾದರೂ ನನಗೋಸ್ಕರ ದಾನಮಾಡು. [12-105]

೪೭. ಆಗ ಆ ಒಂದೊಂದು ನಿಮಿಷದಲ್ಲಿ ನನ್ನ ಅದ್ವಿತೀಯವಾದ ಆನಂದದ ಸವಿಯನ್ನು ಕಂಡವನಿಗೆ ವಿಷಯ ಸುಖಗಳು ಸ್ವಲ್ಪವೂ ರುಚಿಸಲಾರವು. [12-106]

೪೮. ಈ ರೀತಿಯಲ್ಲಿ ಭೋಗಗಳಿಂದ ಅವನು ಹೊರಗೆ ಬಂದು. ಮನಸ್ಸನ್ನು ನನ್ನಲ್ಲಿ ಪ್ರವೇಶಿಸಿ ಮೆಲ್ಲಮೆಲ್ಲನೆ ಮುಂದರಿಯುತ್ತಾ ಕೊನೆಗೆ ಅವನು ನನ್ನ ಸ್ವರೂಪವೇ ಆಗುವನು. ನಾನಾಗಿಯೇ ಉಳಿಯುವನು. [12-109]

೪೯. ಆದುದರಿಂದ ಅಭ್ಯಾಸಕ್ಕೆ ಯಾವುದೂ ದುಷ್ಕರ (ಅಸಾಧ್ಯ) ವಾಗಿರುವುದಿಲ್ಲ. ಈ ಕಾರಣದಿಂದಲೇ ನೀನು ಅಭ್ಯಾಸಬಲದಿಂದಲೇ ನನ್ನಲ್ಲಿ ಸೇರು. ಐಕ್ಯನಾಗು. [12-113]

೫೦. ಆದರೆ ಮನಸ್ಸು, ವಾಚಾ, ದೇಹಗಳಿಂದ ಯಾವ ಯಾವ ವ್ಯಾಪಾರಗಳೆಲ್ಲಾ ಜರಗುವುವೋ ಅವನ್ನು "ನಾನು ಮಾಡುತ್ತಿದ್ದೇನೆ" ಎಂದು ಮಾತ್ರ ಹೇಳಬೇಡ. [12-117]

೫೧. ಜೀವ-ಪರಮಾತ್ಮರಿಬ್ಬರೂ ಏಕಾಸನದಲ್ಲಿ ಕುಳಿತುಕೊಂಡು ಯಾರ ಹೃದಯಮಂದಿರದಲ್ಲಿ ವಿರಾಜಿಸುತ್ತಿರುವರೋ [12-153]

೫೨. ಅವನೇ ನನ್ನ ನಿಜಭಕ್ತನು; ಅರ್ಜುನಾ—ಅವನೇ ಯೋಗಿಯೂ ಮುಕ್ತನೂ ಆಗಿರುವವನು. ಅಷ್ಟೇ ಅಲ್ಲ. ಅವನು ನನ್ನ ವಲ್ಲಭೆಯೂ ನಾನು ಅವನ ಪ್ರಾಣಪ್ರಿಯನೂ ಇರುವೆನೆಂದು ತಿಳಿ. [12-156]

೫೩. ಹೆ ಪಾಂಡವಾ, ಯಾರ ಅಂತಃಕರಣದಲ್ಲಿ ಯಾವ ತರದ ಅಪೇಕ್ಷೆಯೂ ಪ್ರವೇಶಿಸಲಿಲ್ಲವೊ, ಯಾರ ಜೀವನವು ನಿಜಾನಂದದ ಹೆಚ್ಚಳದಿಂದ ತುಂಬಿದೆಯೋ [12-172]

೫೪. ಅವನ ಕುರಿತಾದ ಹಂಬಲವು ನಮ್ಮ ನಿತ್ಯವ್ಯಸನವಾಗಿದೆ,

ನಮ್ಮ ನಿಜಧ್ಯಾಸವೂ ಅವನೇ ಸಂಕ್ಷೇಪವಾಗಿ ಹೇಳುವುದಾದರೆ ಅವನ ದರ್ಶನದಿಂದ ನಮಗೆ ಅತ್ಯಂತ ಸಮಾಧಾನವುಂಟಾಗುವುದು. [12-188]

೫೫. "ಈ ವಿಶ್ವವೇ ನನ್ನ ಮನೆಯಾಗಿದೆ" ಎಂಬ ಭಾವವು ಯಾರ ಬುದ್ಧಿಯಲ್ಲಿ ಸ್ಥಿರವಾಗಿದೆಯೋ, ಚರಾಚರ ವಿಶ್ವವೆಲ್ಲವೂ ತಾನೇ ಆಗಿದ್ದೇನೆಂದು ಯಾರು ತಿಳಿದಿರುವನೋ [12-213]

೫೬. ಮತ್ತು ಇದಕ್ಕಿಂತ ಮಿಗಿಲಾಗಿ ಹೇ ಪಾರ್ಥ, ಯಾರಿಗೆ ನನ್ನ ಭಜನೆಯಲ್ಲಿ ಪರಮಾವಧಿಯ ಪ್ರೀತಿಯಿದೆಯೋ ಅಂಥವನನ್ನೇ ನಾನು ತನ್ನ ತಲೆಯ ಮೇಲೆ ಮುಕುಟವಾಗಿ ಧರಿಸುತ್ತೇನೆ. [12-214]

೫೭. ನನ್ನ ಮೈತ್ರಿಯು ಅವನಲ್ಲಿಯೇ ಸ್ಥಿರವಾಗಿದೆ. ಇದರಲ್ಲಿ ಏನು ವಿಚಿತ್ರವಿದೆ? ಆದರೆ, ಅಂಥ ಭಕ್ತರ ಚರಿತ್ರೆಯನ್ನು ಯಾರು ಕಿವಿಗೊಟ್ಟು ಕೇಳುವರೋ [12-226]

೫೮. ಇದಲ್ಲದೆ ಯಾರು ಭಕ್ತರ ಚರಿತ್ರೆಯನ್ನು ಯಾವಾಗಲೂ ಪ್ರಶಂಸಿಸುವರೋ ಅವರು ನನಗೆ ಪ್ರಾಣಕ್ಕಿಂತಲೂ ಪ್ರಿಯರಾಗಿರುವರು. ಈ ಮಾತು ಸತ್ಯ [12-227]

೫೯. ಹೇ ಪಾಂಡುಪುತ್ರಾ, ಯಾರು ಪ್ರೇಮಭಕ್ತರ ಚರಿತ್ರೆಯನ್ನು ಕೀರ್ತಿಸುವರೋ ಅವರನ್ನು ನಾವು ನಮ್ಮ ಪರಮ ದೇವತೆಯಾಗಿ ಭಾವಿಸುವೆವು. [12-238]

೬೦. ತನ್ನನ್ನೇ ಪೂಜಿಸುವುದನ್ನು (ಆತ್ಮಪೂಜೆಯನ್ನು) ಕಣ್ಣಿಂದ ನೋಡಲಾಗದು. ತನ್ನ ಪ್ರಶಂಸೆಯನ್ನು ಕಿವಿಯಿಂದ ಕೇಳಲಾಗದು. ಈತನು ಇಂಥವನು ಎಂಬ ನೆನಪೂ ಕೂಡ ಉಳಿಯಲಾಗದು— ಈ ರೀತಿಯ ವರ್ತನೆ ಜನರಲ್ಲಿ ಇರಬೇಕು. [13-189]

೬೧. ಹಾಗೆ ತನ್ನ ಅಂತರ್ಬಾಹ್ಯದಲ್ಲಿಯೂ ಯಾರು ಗುರುವಿಗೆ ಅರ್ಪಿತನಾಗಿರುವನೋ, ಯಾರು ತನ್ನನ್ನೇ ಭಕ್ತಿಮಂದಿರವಾಗಿ ಮಾಡಿಕೊಂಡಿರುವನೋ [13-375]

೬೨. ಯಾರು ತನ್ನ ಅಂತಃಕರಣದಲ್ಲಿ ಪ್ರೇಮದ ಪವಾಡದಿಂದ ಗುರುವಿನ ಸುಂದರಮೂರ್ತಿಯನ್ನು ತದೇಕಧ್ಯಾನದಿಂದ ಉಪಾಸನೆ ಮಾಡುವನೋ [13-385]

೬೩. ಯಾರು ಗುರು ಸೇವೆಯಲ್ಲಿ ಕೃಶನಾಗಿರುವನೋ, ಗುರು

ಪ್ರೇಮದಿಂದ ಪೋಷಿತನಾಗಿರುವನೋ, ಗುರುವಿನಾಜ್ಞೆಯನ್ನೇ ತನ್ನ ಮನೆಯಾಗಿ ಮಾಡಿಕೊಂಡಿರುವನೋ [13-443]

೧೪. ಗುರುಕುಲದಿಂದಲೇ ಯಾರು ಸತ್ಕುಲೀನನೆನಿಸಿರುವನೋ, ಗುರು ಬಂಧುಗಳ ಸೌಜನ್ಯದಿಂದ ಸುಜನನಾಗಿರುವನೋ, ಗುರುಸೇವಾ ವ್ಯಸನದಿಂದ ಯಾರು ನಿರಂತರವಾಗಿ ವ್ಯಸನಶೀಲನೊ (ಗುರುಸೇವೆಯ ಹಂಬಲವನ್ನು ನಿರಂತರವಾಗಿ ಬೆಳೆಸಿಕೊಂಡಿರುವನೋ) [13-444]

೧೫. ಯಾರಿಗೆ ಗುರುವೇ ಪುಣ್ಯಕ್ಷೇತ್ರದಂತೆ ಪವಿತ್ರನೋ, ಗುರುವೇ ದೇವರೂ ತಂದೆಯೂ ತಾಯಿಯೂ ಆಗಿರುವನೋ, ಗುರುಸೇವೆಗೆ ಬಿಟ್ಟರೆ ಇನ್ನೊಂದು ಮಾರ್ಗವನ್ನು ಯಾರು ಅರಿತಿಲ್ಲವೋ [13-446]

೧೬. ಯಾರಿಗೆ ಗುರುಭಕ್ತಿಯು ಅಧಿಕ ಆಸೆಯಿದೆಯೋ, ಈ ಭಕ್ತಿಯಲ್ಲಿ ಆದರವಿದೆಯೋ, ಈ ಸೇವೆಗಿಂತ ಮಧುರವಾದ ಬೇರೊಂದನ್ನು ಯಾರು ಕಿಂಚಿತ್ತೂ ಮನ್ನಿಸುವುದಿಲ್ಲವೊ, [13-453]

೧೭. ಅವನೇ ತತ್ವಜ್ಞಾನದ ಮನೆಯಾಗಿದ್ದಾನೆ. ಜ್ಞಾನಕ್ಕೆ ಗೌರವವು ಅವನಿಂದಲೇ ಬಂದಿದೆ. ಅದಂತಿರಲಿ ಆ ಜ್ಞಾನೀ ಭಕ್ತನು ಸಾಕ್ಷಾತ್ ಭಗವಂತನೇ ಆಗಿದ್ದಾನೆ. [13-454]

೧೮. ವಾಂತಿಮಾಡಿದ ಅನ್ನಕ್ಕಾಗಿ ಯಾರೂ ನಾಲಿಗೆಯಿಂದ ಜೊಲ್ಲು ಸುರಿಸುವುದಿಲ್ಲ. ಮೃತನ ಪ್ರೇತ (ದೇಹ)ವನ್ನು ಆಲಿಂಗಿಸಲು ಯಾರೂ ದೇಹವನ್ನು ಮುಂದೊಡ್ಡುವುದಿಲ್ಲ. [13-574]

೧೯. ಅಂತಹ ವಿಷಯವೈರಾಗ್ಯವು ಆತ್ಮಲಾಭದ ಭಾಗ್ಯವಾಗಿದೆ. ಇದರಿಂದಲೇ ಜೀವಿಗಳು ಬ್ರಹ್ಮಾನಂದ ಪದವಿಗೆ ಯೋಗ್ಯರಾಗುತ್ತಾರೆ. (13—523)

೨೦ ಆದುದರಿಂದ "ವಿಶ್ವಭಾವನೆಯನ್ನು ದೂರಮಾಡಿದ ಮೇಲೆ ನನ್ನನ್ನು ಸ್ವೀಕರಿಸಬೇಕು"— ಇದು ಸರಿಯಾದ ಭಾವನೆಯಲ್ಲ. ಯಾಕೆಂದರೆ (ಪ್ರಪಂಚದ ಒಳಗೆ ಹೊರಗೆ) ಎಲ್ಲವೂ ನಾನೇ ಆಗಿದ್ದೇನೆ. (14-380)

೨೧. ಈ ರೀತಿಯಿಂದ ಏಕತ್ವದಿಂದ ನನ್ನನ್ನು ತಿಳಿಯುವುದಕ್ಕೇ ಅವ್ಯಭಿಚಾರೀ (ನಿಶ್ಚಲ) ಭಕ್ತಿಯೆನ್ನುವುದು. ಇದರಲ್ಲೇನಾದರೂ ಭೇದವನ್ನು ಕಂಡೆವಾದರೆ ಅದು ವ್ಯಭಿಚಾರೀ (ಚಂಚಲ) ಭಕ್ತಿಯೆನಿಸುವುದು. (14—381)

೭೨. ಆದರೆ ನನ್ನ ಆರಾಧನೆ, ಉಪಾಸನೆಯು ಬ್ರಹ್ಮತ್ವವನ್ನು ಸೇರುವ ಒಂದು ಮೆಟ್ಟಲು. ಅಲ್ಲಿ ನಾನೊಂದ ಸಾಧನ ಮಾತ್ರ ಎಂದು ತಿಳಿಯಬೇಡ. [14—402]

೭೩. ಅಂತಹ ಭಾವನೆ ನಿನ್ನ ಮನಸ್ಸಿನಲ್ಲಿ ಪ್ರಾಯಶಃ ಸೇರಿಕೊಳ್ಳಬಹುದು. ಆದರೆ ನನ್ನಿಂದ ಬೇರೆಯಾದ ಬ್ರಹ್ಮವೆಂಬುದೇ ಇಲ್ಲ. ನಾನೇ ಪರಬ್ರಹ್ಮವಾಗಿದ್ದೇನೆ. [14—403]

೭೪. ಈಗ ನನ್ನ ಹೃದಯವನ್ನು ನಾಲ್ಕು ಮೂಲೆಯ ಪೀಠವನ್ನಾಗಿ ಮಾಡಿ ಅದರ ಮೇಲೆ ಶ್ರೀಗುರುವಿನ ಚರಣಗಳನ್ನು ಕುಳ್ಳಿರಿಸುವೆನು(ಸ್ಥಾಪಿಸುವೆನು. [75—1]

೭೫. ಅಲ್ಲಿ ನನ್ನ ಅಹಕಾರವೆಂಬ ಧೂಪವನ್ನು ಉರಿಸುವೆ. "ಅವನೇ ನಾನು" ಎಂಬ ಸೋಹಂ ದೀಪವನ್ನು ಬೆಳಗುವೆ. ಸಮರಸ ಭಾವನೆಯಿಂದ ಆ ಚರಣಗಳನ್ನು ನಿರಂತರವಾಗಿ ಆಲಿಂಗಿಸುವೆ. [15—7]

೭೬. ಸ್ವಪ್ನದಲ್ಲಾದ ಗಾಯಕ್ಕೆ ಔಷಧವೆಂದರೆ ಎಚ್ಚರಗೊಳ್ಳುವುದೇ. ಹೀಗೆ ಅಜ್ಞಾನವೆಂಬ ಬೇರನ್ನು ಕತ್ತರಿಸಲು ಜ್ಞಾನವೇ ಖಡ್ಗವಾಗಿದೆ. [15—254]

೭೭. ಹೀಗೆ ಜ್ಞಾನವು ಅಜ್ಞಾನವನ್ನು ಎತ್ತಿಕೊಂಡು ಹೋಯಿತು. ಆತ್ಮವಸ್ತುವನ್ನು ಕೊಟ್ಟು ಹೊರಟುಹೋಯಿತು. ತಿಳಿಯದೆನೇ ಉಳಿಯುವ ಜ್ಞಾನ ಯಾವುದಿದೆಯೋ, [15—528]

೭೮. ಅದೇ ಪುರುಷೋತ್ತಮನೆಂದು ತಿಳಿ. ಮೂರನೆಯದಾದ ಅಂತಿಮ ಸತ್ಯ. ಹಿಂದೆ ಹೇಳಿದ ಕ್ಷರ, ಅಕ್ಷರ (ನಾಶವುಳ್ಳ, ನಾಶರಹಿತ) ಎಂಬ ಎರಡು ತತ್ವಗಳಿಂದಲೂ ಇದು ಬೇರೆಯಾಗಿದೆ. [15 29]

೭೯. ನಿಜವಾಗಿಯೂ ಶಾಸ್ತ್ರವು ಬಾಯಿಯಿಂದ ಹೇಳುವುದಕ್ಕಷ್ಟೇ ಇರುವುದಲ್ಲ. ಸಂಸಾರವನ್ನು ಜಯಿಸುವುದಕ್ಕೆ ಇದು ಶಸ್ತ್ರವಾಗಿದೆ. ಆತ್ಮನು ಅವತರಿಸುವಂತೆ (ಕೆಳಗಿಳಿಯುವಂತೆ) ಮಾಡುವ ಮಂತ್ರಶಕ್ತಿಯು ಅದರ ಅಕ್ಷರಗಳಲ್ಲಿದೆ. [15—577]

೮೦. ಈ ಕಾಮಕ್ರೋಧಗಳ ನಡುವೆ ಯಾರು ನಿಶ್ಚಿಂತೆಯಿಂದ ನಿಂತಿರುವನೋ ಅವನು ಯಮಪುರದ ಸಭೆಯಲ್ಲಿ ಸನ್ಮಾನ ಪಡೆಯುವನು. [16—431]

೬೧. ಶಾಸ್ತ್ರವು ಯಾವುದನ್ನು ತ್ಯಜಿಸಬೇಕೆಂದು ಹೇಳುವುದೋ ಅದನ್ನು ಸಾಮ್ರಾಜ್ಯಪದವಾದರೂ ತೃಣತುಲ್ಯವಾಗಿ ಎಣಿಸಬೇಕು. ಶಾಸ್ತ್ರವು ಅಂಗೀಕರಿಸಲು ಹೇಳುವ ವಿಷಯವು ಹಾಲಾಹಲ ವಿಷವೇ ಇರಲಿ—ಅದನ್ನು ತಿರಸ್ಕರಿಸದೆ ಸಂತೋಷದಿಂದ ಸ್ವೀಕರಿಸಬೇಕು. [16-460]

೬೨. ಹೇ ವೀರಶ್ರೇಷ್ಠಾ, ಈ ರೀತಿಯಲ್ಲಿ ವೇದಗಳ ಮೇಲೆ ಅಚಲವಾದ ನಿಷ್ಠೆಯು ಉತ್ಪನ್ನವಾದರೆ ಅಭಿಷ್ಟ ಪರಂಪರೆಗಳು ನಮಗೆ ಎಲ್ಲಿ ತಾನೇ ಭೇಟಿಯಾಗಬಲ್ಲವು? ಯಾವ ಅನಿಷ್ಟಗಳೂ ನಮಗೆ ತಟ್ಟಲಾರವು. [16-461]

೬೩. ಅಹಿತದಿಂದ ದೂರವಿರಿಸುವ ಹಿತವನ್ನು ಕೊಟ್ಟು ಪೋಷಿಸುವ— ಈ ಕಾರ್ಯವನ್ನು ವೇದಗಳ ಹೊರತು ಬೇರಾರೂ ಮಾಡಲಾರವು. ಈ ಪ್ರಪಂಚದಲ್ಲಿ ವೇದಮಾತೆಯು ಹಾಗೆ ನಮ್ಮನ್ನು ರಕ್ಷಿಸುವ ತಾಯಿ ಬೇರಾರೂ ಇಲ್ಲ. [16—462]

೬೪. ಭೂತಮಾತ್ರಗಳಲ್ಲಿ—ಸಕಲ ಜೀವಿಗಳಲ್ಲಿ—ವ್ಯಾಪಿಸಿರುವ ಭಗವಂತನಿಗೆ ನಾವು ನಮಸ್ಕರಿಸಬೇಕು; ಪರೋಪಕಾರದ ಕಾರ್ಯಗಳಿಂದ ಅವನನ್ನು ಭಜಿಸಬೇಕು; ಸ್ತ್ರೀ ವಿಷಯದಲ್ಲಿ ಆತ್ಮಸಂಯಮವನ್ನು ಪದೇ ಪದೇ ಆಚರಿಸಬೇಕು. [17—210]

೬೫. ಜೀವಿಗಳ ಹೆಸರಿನಿಂದ (ಸಲುವಾಗಿ) ಒಂದು ಹುಲ್ಲನ್ನು ಕೂಡ ಕೀಳಬಾರದು. ಅಷ್ಟುಮಾತ್ರವಲ್ಲ, ಅದನ್ನು ಕತ್ತರಿಸುವುದಾಗಲೀ ಹರಿಯುವುದಾಗಲೀ (ಛೇದಭೇದವನ್ನು) ಮಾಡಕೂಡದು. [17—212]

೬೬. ಯಾರಾದರೂ ಪ್ರಶ್ನೆ ಕೇಳಿದರೆ ಮಾತ್ರ ಮೃದುವಾದ ಮಾತಿನ ಸರಣಿ ಬಾಯಿಂದ ಹೊರಡಬೇಕು. ಇಲ್ಲವಾದರೆ ವೇದಗಳನ್ನು ಯಾ ದೇವರ ನಾಮವನ್ನು ಉಚ್ಚರಿಸುತ್ತಿರಬೇಕು. [17—221]

೬೭. ಸರ್ವ ಮಂತ್ರಗಳ ರಾಜನಾದ "ಓಂ ತತ್ ಸತ್" ಈ ಮಂತ್ರದಲ್ಲಿ ಓಂಕಾರವು ಮೊದಲನೆಯ ಅಕ್ಷರವಾಗಿಯೂ ತತ್ ಕಾರವು ಎರಡನೆಯದಾಗಿಯೂ ಸತ್ ಕಾರವು ಮೂರನೆಯದಾಗಿಯೂ ಬರುವುದು. [17-342]

೬೮. ಈ ರೀತಿಯಲ್ಲಿ ಪರಬ್ರಹ್ಮವು ಓಂ ತತ್ ಸತ್ ಎಂಬ ಮೂರು ಹೆಸರುಗಳಿಂದ ಪ್ರಸಿದ್ಧವಾಗಿದೆ. ಉಪನಿಷತ್ತಿನ ಈ ಸುಂದರವಾದ ಹೂವಿನ ಪರಿಮಳವನ್ನು ಆಘ್ರಾಣಿಸು. [17—343]

೮೯. ಕರ್ಮವನ್ನು ಸಂಪೂರ್ಣವಾಗಿ ತ್ಯಜಿಸುವುದಕ್ಕೆ ಸನ್ಯಾಸವೆಂದು ಕರೆಯುವರು. ಫಲಮಾತ್ರವನ್ನು ತ್ಯಜಿಸುವುದು ತ್ಯಾಗವೆನಿಸುವುದು [18—92]

೯೦. ಸ್ವಭಾವಗತವಾಗಿ ತನ್ನ ಪಾಲಿಗೆ ಬಂದ, ಶಾಸ್ತ್ರಸಮ್ಮತವಾದ, ವಿಹಿತವಾಗಿ ತೋರುವ, ಕರ್ಮವನ್ನು ಆಚರಿಸು. [18—893]

೯೧. ಹೇ ಪಾಂಡವಾ, ಈ ವಿಹಿತಕರ್ಮವನ್ನೇ ನೀನು ಅನನ್ಯಭಾವದಿಂದ ಆಚರಿಸಬೇಕು. ಈ ಕರ್ಮವೇ ಸರ್ವಾತ್ಮಕನಾದ ನನ್ನ ಪರಮಶ್ರೇಷ್ಠವಾದ ಸೇವೆಯೆಂಬುದಾಗಿ ತಿಳಿ. [18—906]

೯೨. ನೋಡು! ಯಾರಿಗೆ ಯಾವುದು ವಿಹಿತವಾದ ಕರ್ಮವೊ ಅದೇ ಈಶ್ವರನ ಸಂಕಲ್ಪವೆಂದು ಭಾವಿಸು. ಅದನ್ನು ನಿಸ್ಸಂಶಯವಾಗಿ ಮಾಡಿದರೆ ಈಶ್ವರನು ಅವನಿಗೆ ಪ್ರಾಪ್ತನಾಗುವನು. [18—911]

೯೩. ಈ ರೀತಿಯ ಸಮಾಹಿತವಾದ ಕರ್ಮವು (ಕರ್ಮಸಮತೆಯು) ಎಲ್ಲಿ ತೋರಿಬರುವುದೋ ಅಲ್ಲಿಯೇ ಪೂಜ್ಯ ಗುರುವಿನ ದರ್ಶನವು ಅನಾಯಾಸವಾಗಿ ಆಗುವುದು. [18—966]

೯೪. "ಬ್ರಹ್ಮವೊಂದೇ ಸತ್ಯ. ಉಳಿದುದೆಲ್ಲವೂ ಭ್ರಾಂತಿ" ಎಂಬ ಅನುಭವವು ಇದರಿಂದ ಇನ್ನೂ ಗಾಢವಾಗಿ ನೆಲೆಯೂರುವುದು.[18-1002]

೯೫. ಹೀಗೆ ಬ್ರಹ್ಮೈಕ್ಯರೂಪದ ಸ್ವರಾಜ್ಯವು ಸಮೀಪಿಸಿದಾಗ ಅವನಿಗೆ ಮೂರು ಲೋಕಗಳೂ ಆನಂದದಿಂದ ತುಂಬಿ ತುಳುಕಾಡಿದಂತೆ ಕಾಣುವುದು. [18—1072]

೯೬. ಹೇ ಕಪಿಧ್ವಜನೇ, ನನ್ನ ಈ ರೀತಿಯ ಸಹಜ ಪ್ರಕಾಶವನ್ನೇ ಭಕ್ತಿಯೆಂಬ ಹೆಸರಿನಿಂದ ಕರೆಯಬೇಕೆಂದು ತಿಳಿ. [18—1117]

೯೭. ಜ್ಞಾನಿಗಳು "ಸ್ವಸಂವಿತಿ" ಎಂದೂ ಶೈವರು "ಶಕ್ತಿ"ಯೆಂದೂ ಯಾವುದನ್ನು ಕರೆಯುವರೋ ಅದಕ್ಕೆ ನಾವು "ನಮ್ಮ ಪರಮಭಕ್ತಿ"ಎಂದು ಕರೆಯುವೆವು. [18—1133]

೯೮. ಅದ್ವೈತವು ನಿಜವಾಗಿಯೂ ಕರ್ಮವನ್ನು ಸಹಿಸದಿದ್ದರೂ ಅದರಲ್ಲಿಯೂ ಭಕ್ತಿಯಿದೆ. ಇದನ್ನು ಅನುಭವದಿಂದ ತಿಳಿಯಬೇಕಲ್ಲದೆ ಮಾತಿನಿಂದ ಹೇಳುವುದಕ್ಕೆ ಬರುವುದಿಲ್ಲ. [18—1151]

೯೯. ಹೇ ಪಾಂಡುಕುಮಾರ—ತಾನು ಅರ್ಜುನನೆಂಬ ಭಾವವನ್ನು ಮರೆತಾಗ—ಅದನ್ನು ತೆಗೆದುಕೊಳ್ಳದಿದ್ದಾಗ "ನಾನು" ಎಂಬುದು ಎಲ್ಲಿಂದ ಉತ್ಪನ್ನವಾಗುವುದೋ ಅದೇ ನಿಜವಾಗಿಯೂ ಆ ಪರಮಾತ್ಮನ ರೂಪವಾಗಿದೆ. [18—1315]

೧೦೦. ಆತನಿಗೇ ನಿನ್ನ ಅಹಂಕಾರ, ಮಾತು, ಮನ, ದೇಹಗಳನ್ನು ಸಮರ್ಪಿಸಿ ಶರಣು ಹೋಗು. ಗಂಗಾನದಿಯು ಸಾಗರದಲ್ಲಿ ಪ್ರವೇಶಿಸುವಂತೆ ನೀನು ಅವನೊಡನೆ ಸಮರಸವಾಗಿ ಬೆರೆಯು. [18—1319]

೧೦೧. ತಾನು ನನ್ನಿಂದ ಬೇರೆಯೆಂದು ತಿಳಿಯದೆ ನನ್ನೊಡನೆ ಏಕತ್ವದಿಂದಿರುವ ಅನುಭವದ ಹೆಸರೇ "ನನಗೆ ಶರಣಾಗುವುದು" ಎಂದಾಗಿದೆ. [18—1398]

೧೦೨. ಮಜ್ಜಿಗೆಯನ್ನು ಕಡೆದು ತೆಗೆದ ಬೆಣ್ಣೆಯನ್ನು ತಿರಗಿ ಮಜ್ಜಿಗೆಯಲ್ಲೇ ಹಾಕಿದಾಗ ಹೇಗೆ ಆ ಬೆಣ್ಣೆಯು ಮಜ್ಜಿಗೆಯೊಡನೆ ಬೆರೆಯದೆ ಪ್ರತ್ಯೇಕವಾಗಿ ಉಳಿಯುವುದೋ [18—1406]

೧೦೩. ಹಾಗೆ ಏಕತೆಯ ಭಾವನೆಯಿಂದ ನನ್ನಲ್ಲಿ ನೀನು ಶರಣಾಗತನಾದರೆ ಧರ್ಮಾಧರ್ಮಗಳು ಸಹಜವಾಗಿ ನಿನಗೆ ತಗಲಲಾರವು. [18—1407]

೧೦೪. ಈ ಗೀತೆಯು ಸಪ್ತಶತಿಯ ಮಂತ್ರಗಳಲ್ಲಿ ವರ್ಣಿಸಲ್ಪಟ್ಟ ಸಾಕ್ಷಾತ್ ಭಗವತಿಯಾಗಿದ್ದಾಳೆ. ಇವಳು ಮೋಹ ಮಹಿಷಾಸುರನನ್ನು ಕೊಂದು ಆನಂದದಲ್ಲಿ ರಮಿಸಿರುವಳು. [18—1666]

೧೦೫. ಆದುದರಿಂದ ಯಾವನು ಮನೋವಾಕ್ಕಾಯಗಳಿಂದಲೂ ಈ ಗೀತಾಮಾತೆಯ ಸೇವಕನಾಗುವನೋ ಆತನನ್ನು ಅವಳು ಸ್ವಾನಂದ ಸಾಮ್ರಾಜ್ಯದ (ಆತ್ಮಾನುಭವದ) ಚಕ್ರವರ್ತಿಯನ್ನಾಗಿ ಮಾಡುವಳು. [18—1667]

೧೦೬. ಆದುದರಿಂದ ಇದನ್ನು ಸಮರ್ಥಿಸುವುದಕ್ಕೆ ಬೇಕಾದ ವಿಷಯವೇನೂ ನನ್ನಲ್ಲಿ ಉಳಿದಿರುವುದಿಲ್ಲ. ಗೀತೆಯು ಆ ಭಗವಂತನ ಪ್ರತ್ಯಕ್ಷ ವಾಙ್ಮಯೀ ಶ್ರೀ ಮೂರ್ತಿಯೇ ಆಗಿರುವಳು. [18—1684]

೧೦೭. ದುರಿತ ದುಃಖಗಳ ಅಂಧಕಾರವು ದೂರವಾಗಲಿ. ವಿಶ್ವವೆಲ್ಲಾ ಸ್ವಧರ್ಮಸೂರ್ಯನ ಪ್ರಕಾಶದಿಂದ ಬೆಳಗಲಿ. ಪ್ರಪಂಚದ ಎಲ್ಲಾ ಜೀವಿಗಳು—ಯಾರ್ಯಾರು ಏನೇನನ್ನು ಆಶಿಸುವರೋ—ಅವರ ಇಷ್ಟಾರ್ಥಗಳೆಲ್ಲಾ ಅವರಿಗೆ ಲಭಿಸಲಿ. [18—1795]

೧೦೮. ಸಂಕ್ಷೇಪವಾಗಿ ಹೇಳುವುದಾದರೆ ಮೂರು ಲೋಕಗಳೂ ಸರ್ವಸುಖಗಳಿಂದಲೂ ಪೂರ್ಣವಾಗಿ ತುಂಬಿ ಆದಿ ಪುರುಷನನ್ನು (ಭಗವಂತನನ್ನು) ಅಖಂಡವಾಗಿ (ಎಡೆತಡೆಯಿಲ್ಲದೆ) ಭಜಿಸಲಿ, ಆರಾಧಿಸಲಿ. [18—1799]

ಓಂ ತತ್‌ಸತ್

Edited, Printed & Published by K. V. Shenoy
at The Prabhat Printers, Ltd., Mangalore.